# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರಿಂದ ನಿಯಮ 72 ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರದ ಸಾರಾಂಶ :

ರಾಜ್ಯ ಸರ್ಕಾರ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಹಲವು ಸೆಕ್ಷನ್‌ಗಳನ್ನು ತೆಗೆದು ಹಾಕಲು ನಿರ್ಧರಿಸಿರುವುದು ವಿಷಾದನೀಯ ಹಾಗೂ ಶ್ರೀ ದೇವರಾಜ ಅರಸು ರವರಿಗೆ ಮಾಡಿದ ಅಪಮಾನ ಎಂದರೆ ತಪ್ಪಾಗಲಾರದು. ಭೂ ಸುಧಾರಣಾ ಕಾಯ್ದೆ ಸೆಕ್ಷನ್ 79ಎ ಮತ್ತು ಬಿ ಹಾಗೂ 80ನೇ ಸೆಕ್ಷನ್‌ಗಳು ಕೃಷಿ ಭೂಮಿ ಖರೀದಿಗೆ ಕೆಲವು ಷರತ್ತುಗಳನ್ನು ಒಡ್ಡಿದ್ದವು. ಇದರಿಂದ ಕೃಷಿಕರಲ್ಲದವರು ಕೃಷಿ ಭೂಮಿ ಖರೀದಿಸಲು ಸಾಧ್ಯವಿರಲಿಲ್ಲ. ಇದರಿಂದ ಭೂಮಿಯು ಕೃಷಿಕರಲ್ಲಿಯೇ ಉಳಿದು ಅವರು ವ್ಯವಸಾಯ ಮಾಡುತ್ತಾ ಅವರ ಕುಟುಂಬವು ಸುಕೃತದಿಂದ ಜೀವನ ಸಾಗಿಸುತ್ತಿದ್ದವು.

ಈ ಸೆಕ್ಷನ್‌ಗಳನ್ನು ಸರ್ಕಾರವು ತೆಗೆದು ಹಾಕುವುದರಿಂದ ಭವಿಷ್ಯದಲ್ಲಿ ರೈತರುಗಳು ತಮ್ಮ ಕೃಷಿ ಜಮೀನುಗಳನ್ನು ಹಣದ ಆಸೆಗೆ ಮಾರಾಟ ಮಾಡಿ ಹಣವನ್ನು ಖರ್ಚು ಮಾಡಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ. ಇದರಿಂದ ರಾಜ್ಯ ಹಾಗೂ ರಾಷ್ಟ್ರ ಪ್ರಗತಿಗೆ ಮಾರಕವಾಗುತ್ತದೆ. ಇದನ್ನು ಮನಗಂಡೇ ಶ್ರೀ ದೇವರಾಜ ಅರಸು ರವರು ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದು ಕೃಷಿಕರ ಭೂಮಿ ಅವರಲ್ಲೇ ಉಳಿಯುವಂತೆ ಮಾಡಿದ್ದರು. ಆದ್ದರಿಂದ ಸರ್ಕಾರವು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಮೂಲಕ ನಿರ್ಬಂಧ ಮಾಡುತ್ತಿರುವ ಸೆಕ್ಷನ್‌ಗಳನ್ನು ಯಥಾವತ್ತು ಮುಂದುವರಿಸಿ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡುವ ಸಂಬಂಧ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

## ಮಾನ್ಯ ಕಂದಾಯ ಸಚಿವರ ಹೇಳಿಕೆ :

ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎ ಅಡಿಯಲ್ಲಿ ಯಾರೇ ಕೃಷಿಕರಿದ್ದರೂ ಸಹ ಅವರ ವಾರ್ಷಿಕ ವರಮಾನ ಇತರೆ ಕೃಷಿಯೇತರದಿಂದ ರೂ.25–00 ಲಕ್ಷಗಳಿಗಿಂತ ಹೆಚ್ಚು ವರಮಾನವಿದ್ದರೆ ಕೃಷಿ ಜಮೀನು ಕೊಂಡುಕೊಳ್ಳಲು ಅರ್ಹತೆ ಇಲ್ಲವಾಗಿತ್ತು. ಅಲ್ಲದೆ, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ರ ಕಲಂ 79ಬಿ ರಡಿಯಲ್ಲಿ ಯಾರೇ ಕೃಷಿ ಜಮೀನನ್ನು ಕೃಷಿಯೇತರರು ಕೊಂಡುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲವಾಗಿತ್ತು.

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ರ ಕಲಂ 79ಎ ಮತ್ತು 79ಬಿ ರಡಿ ಒಟ್ಟು 83,171 ಪ್ರಕರಣಗಳು ದಾಖಲಾಗಿದ್ದು, ಒಟ್ಟು 1,76,189–37 ಎಕರೆ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ. ಅದರಲ್ಲಿ ಈ ಪ್ರಕರಣಗಳು ಇತ್ಯರ್ಥವಾಗಿ ಇನ್ನೂ 12,231 ಪ್ರಕರಣಗಳು ಬಾಕಿ ಇದ್ದು, ಅದರಲ್ಲಿ 24,553–3 ವಿಸ್ತೀರ್ಣದ ಜಮೀನು ಇರುತ್ತವೆ. ಈ ಇತ್ಯರ್ಥವಾಗದ ಬಾಕಿ ಇರುವ ಪ್ರಕರಣಗಳ ಬಗ್ಗೆ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 79ಎ ಮತ್ತು

79ಬಿ ಪ್ರಕರಣಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲದ್ದನ್ನು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 16199/2019 ರ ಪ್ರಕರಣದಲ್ಲಿ ಗಮನಿಸಿದೆ.

ಮುಂದುವರಿದು ರಾಜ್ಯದಲ್ಲಿ ಒಟ್ಟು 190–50 ಲಕ್ಷ ಹೆಕ್ಟೇರ್ ಜಮೀನು ಇದ್ದು, ಅದರಲ್ಲಿ ಅರಣ್ಯ ಭೂಮಿ 30–73 ಲಕ್ಷ ಹೆಕ್ಟೇರ್ ಇರುತ್ತದೆ. ಅದೇ ರೀತಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು **(Not available for cultivation)** 22.94 ಲಕ್ಷ ಹೆಕ್ಟೇರ್ ಜಮೀನು ಇರುತ್ತದೆ. ಹಾಗೆಯೇ ಬೀಳು ಬಿದ್ದ ಜಮೀನು **(fallow land)** ಒಟ್ಟು 22.07 ಲಕ್ಷ ಹೆಕ್ಟೇರ್ ಇರುತ್ತದೆ. ವ್ಯವಸಾಯ ಮಾಡದೇ ಬೀಳು ಬಿದ್ದ ಜಮೀನುಗಳು **(Un cultivated land excluding fallow land)** ಒಟ್ಟು 11.79 ಲಕ್ಷ ಹೆಕ್ಟೇರ್ ಜಮೀನು ಇರುತ್ತದೆ. ಈ ವಿಧೇಯಕದಿಂದ ಪ್ರಸಕ್ತ ಕೃಷಿಕರಲ್ಲದವರು ಸಹ ಕೃಷಿ ಜಮೀನನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಬೀಳು ಬಿದ್ದ ಜಮೀನುಗಳಲ್ಲಿ ಕೃಷಿ ಮಾಡಲು ಅವಕಾಶ ಕಲ್ಪಿಸಬಹುದಾಗಿದೆ. ವಿಶೇಷವಾಗಿ ಯುವ ಪೀಳಿಗೆಯನ್ನು ತಾಂತ್ರಿಕತೆ ಮೂಲಕ ಕೃಷಿ ಕಡೆಗೆ ಸೆಳೆಯಲು ಅನುಕೂಲವಾಗುತ್ತದೆ. ಹೆಚ್ಚು ಜನ ಕೃಷಿ ಜಮೀನನ್ನು ಕೊಂಡುಕೊಳ್ಳಲು ಪ್ರಾರಂಭಿಸಿದರೆ ರೈತರ ಜಮೀನಿನ ಬೆಲೆಯೂ ಸಹ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆ.

ಆರ್ಥಿಕವಾಗಿ ಸಬಲರಾಗಿದ್ದವರು ಕೃಷಿ ಭೂಮಿಯನ್ನು ಖರೀದಿಸಿ ಆಧುನಿಕ ರೀತಿಯಲ್ಲಿ ಕೃಷಿ ಮಾಡುವುದರಿಂದ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯೂ ಕೂಡ ವೃದ್ಧಿಯಾಗುತ್ತದೆ. ಇದರಿಂದ ಕೃಷಿ ಉತ್ಪನ್ನಗಳ ಉತ್ಪಾದನೆಯು ಸಹ ಹೆಚ್ಚಾಗಲಿದೆ ಹಾಗೂ ಕೃಷಿ ಮಾಡುವವರ ಸಂಖ್ಯೆಯೂ ಸಹ ಗಣನೀಯವಾಗಿ ಹೆಚ್ಚಾಗಲಿದೆ.

ಬಹುತೇಕ ರಾಜ್ಯಗಳಲ್ಲಿ ಇರುವ ಭೂ ಸುಧಾರಣೆ ಕಾಯ್ದೆಗಳಲ್ಲಿ ಕಲಂ 79ಎ ಮತ್ತು 79ಬಿ ಹಾಗೂ 80 ನೇ ಸೆಕ್ಷನ್‌ಗಳು ಅಂತಹ ಷರತ್ತುಗಳು ಇಲ್ಲದೇ ಇರುವುದರಿಂದ ನಮ್ಮ ರಾಜ್ಯದ ಹೆಚ್ಚಿನ ಜನರು ನೆರೆ ರಾಜ್ಯಗಳಲ್ಲಿ ಜಮೀನುಗಳನ್ನು ಕೊಂಡುಕೊಳ್ಳುತ್ತಿದ್ದು ಈ ತಿದ್ದುಪಡಿಯಿಂದ ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜಿಸಬಹುದಾಗಿದೆ.

ಈ ವಿಧೇಯಕದ ಉದ್ದೇಶವು ಉಳ್ಳವರಿಗೆ ಅಲ್ಲ, ಉಳುಮೆಯಲ್ಲಿ ಆಸಕ್ತಿ ಇರುವವರಿಗೆ ಭೂಮಿ ಖರೀದಿಸಿ ಕೃಷಿ ಮಾಡಲು ಉತ್ತೇಜನ ನೀಡುವುದಾಗಿದೆ ಹಾಗೂ ಬಲವಂತವಾಗಿ ರೈತರ ಜಮೀನುಗಳನ್ನು ಖರೀದಿಸಲು ಅನುವು ಮಾಡಿಕೊಡುವಂತಹ ಯಾವುದೇ ಉದ್ದೇಶ ಹೊಂದಿರುವುದಿಲ್ಲ. ಈಗಾಗಲೇ ಗ್ರಾಮೀಣ ಭಾಗದಿಂದ ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿರುವ ಯುವ ಪೀಳಿಗೆಗಳನ್ನು ಕೃಷಿಯತ್ತ ಸೆಳೆಯಲು ಪೂರಕವಾಗಿರುತ್ತದೆ.

(ಆರ್. ಅಶೋಕ)
ಮಾನ್ಯ ಕಂದಾಯ ಸಚಿವರು